# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1178 |
| ಮಾನ್ಯ ಸದಸ್ಯರ ಹೆಸರು | ಶ್ರೀ ಗೋವಿಂದ ರಾಜು (ವಿಧಾನಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕೋಲಾರ ಜಿಲ್ಲೆಗೆ ಸರ್ಕಾರದಿಂದ ಈವರೆಗೂ ರೈತರಿಗೆ ಮಂಜೂರಾಗಿರುವ ಜಮೀನುಗಳನ್ನು ಪೋಡಿ ಮಾಡಿ ದುರಸ್ತಿ ಪಡಿಸಲು ಬಾಕಿಯಿರುವ ಪ್ರಕರಣಗಳೆಷ್ಟು; | ಕೋಲಾರ ಜಿಲ್ಲೆಯಲ್ಲಿ ದರಖಾಸ್ತು ಪೋಡಿ ಅಭಿಯಾನದಡಿ ಈವರಗೆ ಒಟ್ಟು 6,845 ಮಂಜೂರಿದಾರರ ಅರ್ಜಿಗಳು ಪೋಡಿ ದುರಸ್ತಿಗಾಗಿ ಅನುಭಂದ-1 ರಂತೆ ಸ್ವೀಕೃತವಾಗಿದ್ದು, ಈ ಪೈಕಿ 5,510 ಮಂಜೂರಿದಾರರ ಮಂಜೂರಿಯಂತೆ ಅಳತೆ ಮಾಡಿ 1,860 ಮಂಜೂರಿದಾರರಿಗೆ ದುರಸ್ತಿಪಡಿಸಲಾಗಿದ್ದು, ಅಳತೆ ನಂತರ 3,650 ಮಂಜೂರಿದಾರರ ಜಮೀನು ದುರಸ್ತಿಗಾಗಿ ವಿವಿದ ಹಂತದಲ್ಲಿ ಬಾಕಿಯಿರುತ್ತವೆ. |
| (ಆ) | ಈ ರೀತಿ ಬಾಕಿಯಿರುವ ಪ್ರಕರಣಗಳ ಪೈಕಿ ರೈತರ ಬಳಿ ದೃಢೀಕೃತ ಮೂಲ ಮಂಜೂರಾತಿ ಖಲೆಗಳಿದು, ಇದರ ಮೂಲ ಮಂಜೂರಾತಿ ಕಡತಗಳು ತಾಲ್ಲೂಕು ಕಛೇರಿಗಳಲ್ಲಿ ಲಭ್ಯವಿಲ್ಲದೇ ರೈತರು ತಮ್ಮ ಜಮೀನುಗಳನ್ನು ಪೋಡಿ ಮಾಡಿಸಲಾಗದೇ ತೊಂದರೆಗನ್ನು ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಪ್ರಕರಣಗಳ ವಿವರಗಳನ್ನು ಒದಗಿಸುವುದು) | ಬಂದಿದೆ.<br><br>**ತಾಲ್ಲೂಕುವಾರು ಪ್ರಕರಣಗಳ ವಿವರ ಈ ಕೆಳಗಿನಂತಿರುತ್ತದೆ.** (see table below) |

| ಕ್ರ. | ತಾಲ್ಲೂಕುಗಳು | ಸ್ವೀಕೃತಿ ಆಗಿರುವ ಅನುಬಂಧ-1 / ಬ್ಲಾಕ್‌ಗಳು | ಅಳತೆ ಯಾ ಗಿರುವ ಬ್ಲಾಕ್‌ಗಳು | ದುರಸ್ತಿ ಪಡಿಸಿರುವ ಬ್ಲಾಕ್‌ಗಳು | ವಿವಿಧ ಹಂತದಲ್ಲಿ ಬಾಕಿ |
|---|---|---|---|---|---|
| 1 | ಕೋಲಾರ | 1702 | 1636 | 608 | 1028 |
| 2 | ಮಾಲೂರು | 362 | 298 | 175 | 123 |
| 3 | ಬಂಗಾರಪೇಟೆ | 696 | 553 | 143 | 410 |
| 4 | ಕೆ.ಜಿ.ಎಫ್ | 559 | 448 | 179 | 269 |
| 5 | ಮುಳಬಾಗಿಲು | 2484 | 1978 | 589 | 1389 |
| 6 | ಶ್ರೀನಿವಾಸಪುರ | 1042 | 597 | 166 | 431 |
| | **ಒಟ್ಟು** | **6,845** | **5,510** | **1,860** | **3,650** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಇ) | ಇಂತಹ ಪ್ರಕರಣಗಳನ್ನು ತ್ವರಿತವಾಗಿ ಇತ್ಯರ್ಥ ಪಡಿಸಿ, ರೈತರ ಹಿತ ರಕ್ಷಣೆಗೆ ಸರ್ಕಾರವು ಈವರೆಗೆ ತೆಗೆದುಕೊಂಡ ಕ್ರಮಗಳೇನು; | ರಾಜ್ಯದಲ್ಲಿ ಇರುವ ಬಹುಮಾಲೀಕತ್ವದ ಖಾಸಗಿ/ಹಿಡುವಳಿ ಜಮೀನುಗಳನ್ನು ಅಳತೆಗೆ ಒಳಪಡಿಸಿ ಏಕ ಮಾಲೀಕತ್ವಕ್ಕೆ ಪರಿವರ್ತಿಸುವ ಉದ್ದೇಶದಿಂದ ರಾಜ್ಯದಲ್ಲಿ ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರಗಳನ್ನು ಹೊರತು ಪಡಿಸಿ, ಉಳಿದ 174 ವಿಧಾನ ಸಭಾ ಕ್ಷೇತ್ರಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಸೆಪ್ಟೆಂಬರ್-2015 ರಿಂದ ಪ್ರಾರಂಭಿಸಲಾಗಿದ್ದು, ಈವರೆಗೆ ಒಟ್ಟು 19,635 ಗ್ರಾಮಗಳನ್ನು ಆಯ್ಕೆ ಮಾಡಿಕೊಂಡು ಅಳತೆ ಕಾರ್ಯ ಪೂರೈಸಲಾಗಿದ್ದು, ಯೋಜನೆ |

| | | |
|---|---|---|
| | | ಕಾರ್ಯ ಪ್ರಗತಿಯಲ್ಲಿದೆ.<br><br>ದರಖಾಸ್ತು ಪೋಡಿ ದುರಸ್ತಿ ಮಾಡುವ ಕುರಿತು ಸರ್ಕಾರವು "ದರಖಾಸ್ತು ಪೋಡಿ ಅಭಿಯಾನ" ಪ್ರಾರಂಭಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ: 25-11-2024 ರಲ್ಲಿ ನಮೂನೆ 01 ರಿಂದ 05 ಮತ್ತು 06 ರಿಂದ 10ಅನ್ನು ಭರ್ತಿ ಮಾಡಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ.<br><br>ನಮೂನೆ 01 ರಿಂದ 05 ಗಳಿಗೆ ಸಂಬಂಧಿಸಿದ ಉಪ ವಿಭಾಗಾಧಿಕಾರಿ ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಇದನ್ನು ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ. ಮತ್ತು ಸರ್ಕಾರಿ ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ. ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿಗೆ ಒಂದು ಬಾರಿಗೆ ಎಲ್ಲಾ ಮಂಜೂರಿದಾರರಿಗೆ ಏಕಕಾಲಕ್ಕೆ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು ಮತ್ತು ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಸಹ ಆನ್‌ಲೈನ್ ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ. |
| (ಈ) | ಕಡತಗಳ ವಿಲೇವಾರಿ ಸಮಿತಿಗೆ ಶಿಫಾರಸ್ಸು ಮಾಡಿ, ಇತ್ಯರ್ಥಪಡಿಸದೇ ಬಾಕಿಯಿರುವ ಪ್ರಕರಣಗಳೆಷ್ಟು; (ವಿವರಗಳನ್ನು ಒದಗಿಸುವುದು) | ಕೋಲಾರ ಜಿಲ್ಲೆಯಲ್ಲಿ ಕಡತಗಳ ವಿಲೇವಾರಿ ಸಮಿತಿಗೆ ಒಟ್ಟು 38 ಪ್ರಕರಣಗಳು ಶಿಫಾರಸ್ಸುಗೊಂಡಿದ್ದು, ಈ ಪೈಕಿ 7 ಪ್ರಕರಣಗಳು ವಿಲೇವಾರಿಯಾಗಿ, 8 ಕಡತಗಳು ತಿರಸ್ಕೃತಗೊಂಡು,<br>23 ಕಡತಗಳು ಬಾಕಿ ಇರುತ್ತವೆ. |
| (ಉ) | ಈ ಬಾರಿ ಗೈರು ಕಡತಗಳ ವಿಲೇವಾರಿ ಸಮಿತಿಯಲ್ಲಿ ಇತ್ಯರ್ಥವಾಗದೇ, ವಿನಾಕಾರಣ ರೈತರನ್ನು ಅಲೆದಾಡಿಸುತ್ತಿರುವ ಬಗ್ಗೆ, ಸರ್ಕಾರದ ನಿಲುವೇನು; ಯಾವ ಕಾಲಮಿತಿಯೊಳಗೆ ಇಂತಹ ಪ್ರಕರಣಗಳನ್ನು ಇತ್ಯರ್ಥ ಪಡಿಸಲಾಗುವುದು? | ಇಂತಹ ಪ್ರಕರಣಗಳು ಯಾವುದೂ ಇರುವುದಿಲ್ಲ. ಕೋಲಾರ ಜಿಲ್ಲೆಯಲ್ಲಿ ಪ್ರತಿ ತಿಂಗಳ 1ನೇ ಹಾಗೂ 3ನೇ ಶನಿವಾರದಂದು ಗೈರುವಿಲೇ ಪುನರ್‌ನಿರ್ಮಾಣ ಸಮಿತಿ ಸಭೆಯನ್ನು ಹಮ್ಮಿಕೊಳ್ಳಲಾಗುತ್ತಿದ್ದು, ಸಮಿತಿಗೆ ಸ್ವೀಕೃತವಾಗುವ ಕಡತಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಕಂಇ 08 ಎಲ್ ಜಿಪಿ 2016, ದಿನಾಂಕ: 20-06-2016 ರಲ್ಲಿನ ನಿರ್ದೇಶನಗಳನುಸಾರವಾಗಿ ಹಂತ ಹಂತವಾಗಿ ಇತ್ಯರ್ಥಪಡಿಸಲಾಗುತ್ತಿದೆ. |

**ಸಂಖ್ಯೆ: ಕಂಇ 234 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು